**ಅಸಲು ದಾವ ಸಂಖ್ಯೆಃ 292/2022**
**ಡಿ.ಡಬ್ಲೂ -1**

**ದಿಃ 05-02-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**
**<u>ಮುಂದುವರೆದ ಪಾಟೀ ಸವಾಲು ವಾದಿಪರ ವಕೀಲರಾದ ಶ್ರೀ YGG ರವರಿಂದಃ-</u>**

1. ನಾನು 2002 ನೇ ಇಸವಿಯಲ್ಲಿ ದಾವಾ ಸ್ವತ್ತಿನಲ್ಲಿರುವ ಮನೆಯನ್ನು ಕಟ್ಟಿರುತ್ತೇನೆ ಎಂದು ನನ್ನ ಲಿಖಿತ ಹೇಳಿಕೆಯಲ್ಲಾಗಲೀ ಅಥವಾ ನನ್ನ ಮುಖ್ಯ ವಿಚಾರಣೆಯಲ್ಲಾಗಲೀ ಹೇಳಿರುವುದಿಲ್ಲ ಎಂದರೆ ಸಾಕ್ಷಿ ತಾನು ಪಂಚಾಯತಿ ದಾಖಲೆ ನೀಡಿರುವುದಾಗಿ ನುಡಿಯುತ್ತಾರೆ. ದಾವಾ ಸ್ವತ್ತಿನ ಕುರಿತು ವಾದಿ ಹಾಗೂ ನನ್ನ ನಡುವೆ ವಿಭಾಗ ಆಗಿರುತ್ತದೆಯೋ ಇಲ್ಲವೋ ಎಂದು ನನಗೆ ನೆನಪಿಲ್ಲ. ವಿಭಾಗ ಆಗಿರುತ್ತದೆಯೋ ಇಲ್ಲವೋ ಎಂದು ನಾನು ನನ್ನ ಲಿಖಿತ ಹೇಳಿಕೆ ಅಥವಾ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಹೇಳಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಕುರಿತು ನನ್ನ ಹಾಗೂ ವಾದಿಯ ನಡುವೆ ವಿಭಾಗ ಆಗಿರುತ್ತದೆ ಹಾಗೂ ಅದರ ಕುರಿತು ವಾದಿಗೆ ಹಣ ನೀಡಲಾಗಿದೆ ಎಂದು ನಾನು ಉಲ್ಲೇಖ ಮಾಡಿರುತ್ತೇನೆ. ಸದರಿ ವಾಟ್ನಿ ಅಥವಾ ವಿಭಾಗ ಆಗಿರುತ್ತದೆ ಎಂದು ತೋರಿಸಲು ನಾನು ದಾಖಲೆ ಹಾಜರುಪಡಿಸಿರುವುದಿಲ್ಲ ಎಂದರೆ ಸಾಕ್ಷಿಯು ಸದರಿ ವಿಭಾಗ ಮೌಖಿಕವಾಗಿ ಆಗಿರುತ್ತದೆ ಎಂದು ನುಡಿಯುತ್ತಾರೆ. ನಾನು ಸದರಿ ವಾಟ್ನಿಯ ಕುರಿತು ವಾದಿಗೆ ಹಣ ಕೊಟ್ಟಿರುವ ಬಗ್ಗೆ ನನ್ನ ಬಳಿ ಹಣ ಇತ್ತು ಎಂದು ತೋರಿಸಲು ನಾನು ದಾಖಲೆ ಹಾಜರಪಡಿಸಿರುವುದಿಲ್ಲ. ನಾನು ವಾದಿಗೆ ಯಾವುದೇ ಹಣ ಕೊಟ್ಟಿರುವುದಿಲ್ಲ ಹಾಗೂ ದಾವಾ ಸ್ವತ್ತಿನ ಕುರಿತು ನನ್ನ ಹಾಗೂ ವಾದಿಯ ನಡುವೆ ಯಾವುದೇ ವಿಭಾಗ ಆಗಿರುವುದಿಲ್ಲ ಎಂದರೆ ಸರಿಯಲ್ಲ.

2. ರೇಣುಕಾ ಚಾಂಗು ಸಾವಗಾಂವಕರ ಎಂದರೆ ನನ್ನ ಸಹೋದರಿ. ರೇಣುಕಾ ರವರು ನನ್ನ ವಿರುದ್ಧ ಅಸಲು ದಾವಾ ಸಂಖ್ಯೆ 118/2013 ರಂತೆ ದಾವೆ ಹೂಡಿರುತ್ತಾರೆ. ರೇಣುಕಾ ರವರು ನಮ್ಮ

ಪಿತ್ರಾರ್ಜಿತ ಆಸ್ತಿಯ ಕುರಿತು ವಿಭಾಗ ಕೋರಿ ದಾವೆ ಹೂಡಿರುತ್ತಾರೆ ಎಂದರೆ ಸರಿ. ಈ ದಾವೆಯ ದಾವಾ ಸ್ವತ್ತು ಹಾಗೂ ಅಸಲು ದಾವಾ ಸಂಖ್ಯೆ 118/2013 ರಲ್ಲಿನ ದಾವಾ ಸ್ವತ್ತು ಬೇರೆ ಬೇರೆಯಾಗಿರುತ್ತವೆ ಎಂದರೆ ಸರಿಯಲ್ಲ. ಸಾಕ್ಷಿ ಅವುಗಳು ಒಂದೇ ಆಗಿರುತ್ತವೆ ಎಂದು ನುಡಿಯುತ್ತಾರೆ. ಪ್ರಸ್ತುತ ದಾವೆಯ ದಾವಾ ಸ್ವತ್ತು ನಮ್ಮ ತಂದೆಗೆ ಸೇರಿದ ಸ್ವಯಾರ್ಜಿತ ಸ್ವತ್ತು ಆಗಿರುತ್ತದೆ ಎಂದರೆ ಸರಿ. ನನ್ನ ಸಹೋದರಿ ಹಾಗೂ ಸದರಿ ದಾವೆಯಲ್ಲಿರುವ ಬೇರೆ ಪಕ್ಷಗಾರರು ಈ ದಾವೆಯ ದಾವಾ ಸ್ವತ್ತಿಗೂ ಅವರಿಗೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿ. ದಾವಾ ಸ್ವತ್ತಿನಲ್ಲಿ ನನಗೆ ಹಾಗೂ ವಾದಿಗೆ ಇಬ್ಬರಿಗೂ ಹಕ್ಕು ಇರುತ್ತದೆ ಎಂದರೆ ಸರಿಯಲ್ಲ. ವಾದಿಯು ನನಗೆ ದಾವಾ ಸ್ವತ್ತಿನಲ್ಲಿ ವಿಭಾಗ ಮಾಡಬೇಕೆಂದು ಕೇಳಿಕೊಂಡಾಗ ನಾನು ನಿರಾಕರಿಸಿದ ಕಾರಣ ವಾದಿ ನನ್ನ ವಿರುದ್ಧ ಈ ದಾವೆ ಹೂಡಿರುತ್ತಾರೆ ಎಂದರೆ ಸಾಕ್ಷಿ ವಾದಿಗೂ ದಾವಾ ಸ್ವತ್ತಿಗೂ ಯಾವುದೇ ಸಂಬಂಧ ಇರುವುದಿಲ್ಲ ಎಂದು ನುಡಿಯುತ್ತಾರೆ. ದಾವಾ ಸ್ವತ್ತಿಗೆ ನನಗೆ ಹಾಗೂ ವಾದಿಗೆ ಮಾತ್ರ ಸಂಬಂಧ ಇರುವ ಕಾರಣ ಅಸಲು ದಾವಾ ಸಂಖ್ಯೆ 118/2013 ರಲ್ಲಿನ ಪಕ್ಷಗಾರರನ್ನು ಈ ದಾವೆಯಲ್ಲಿ ಸೇರಿಸುವ ಅವಶ್ಯಕತೆ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ಅಸಲು ದಾವಾ ಸಂಖ್ಯೆ 118/2013 ರಲ್ಲಿ ನನ್ನ ಲಿಖಿತ ಹೇಳಿಕೆ ಸಲ್ಲಿಸಿರುತ್ತೇನೆ. ಸದರಿ ತಕರಾರಿನ ಪ್ರತಿಯನ್ನು ನಾನು ಈ ದಾವೆಯಲ್ಲಿ ಹಾಜರಪಡಿಸಿರುವುದಿಲ್ಲ. ಅದನ್ನು ಈ ದಾವೆಯಲ್ಲಿ ಹಾಜರಪಡಿಸಲು ನನಗೆ ಅಡಚಣೆ ಇರುವುದಿಲ್ಲ ಎಂದರೆ ಸಾಕ್ಷಿ ಎರಡೂ ದಾವೆ ಒಂದೇ ಆಗಿರುತ್ತವೆ ಎಂದು ನುಡಿಯುತ್ತಾರೆ. ಅಸಲು ದಾವಾ ಸಂಖ್ಯೆ 118/2013 ರಲ್ಲಿ ಪಕ್ಷಗಾರರಾಗಿರುವ ನನ್ನ ಸಹೋದರಿ ಹಾಗೂ ಇತರೆ ಪಕ್ಷಗಾರರಿಗೆ ಈ ದಾವಾ ಸ್ವತ್ತಿನಲ್ಲಿ ಹಿಸ್ಸೆ ನೀಡಲು ನನಗೆ ತಕರಾರು ಇರುವುದಿಲ್ಲ. ನನ್ನ ಹಾಗೂ ವಾದಿಯ ನಡುವೆ ದಾವಾ ಸ್ವತ್ತಿನ ಕುರಿತು ವಿಭಾಗ

ಆಗಿರುವುದಿಲ್ಲ, ಆದ್ದರಿಂದ ದಾವಾ ಸ್ವತ್ತಿನಲ್ಲಿ ವಾದಿಗೂ ಹಿಸ್ಸೆ ನೀಡಬೇಕಾಗುತ್ತದೆ ಎಂಬ ಕಾರಣಕ್ಕೆ ನಾನು ನ್ಯಾಯಾಲಯದ ಮುಂದೆ ಇಲ್ಲಸಲ್ಲದ ಉತ್ತರ ನೀಡುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇರುವುದಿಲ್ಲ.**

**(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೇ ಸರಿಯಿದೆ.**

**Sd/-**

**ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಧೀಶರು,**

**ಬೆಳಗಾವಿ.**